ಇಲ್ಲ... ನಡಿಯೋ... ದೊರೆಸಾನಿಗೆ ಕೋಪ ಬರುತ್ತದೆ...' ಎಂದನು.

'ಏ... ನಿಂದೊಳ್ಳೆ ಕಥೆ ಆಯಿತು. ಇಷ್ಟು ಬೇಗ ಕೆಲಸ ಆಗಿಬಿಡುತ್ತದಾ... ಸುಮ್ಮನೆ ಹೇಳುತ್ತಾರೆ, ಒಂದೆರಡು ಗಂಟೆಯಾದರೂ ಆಗುತ್ತದೆ ನೋಡು. ಅಪರೂಪಕ್ಕೆ ಬಂದಿದ್ದಾರೆಂದು ಎಲ್ಲರೂ ಇನ್ನೂ ಸ್ವಲ್ಪಹೊತ್ತು ಇರುವಂತೆ ಬಲವಂತ ಮಾಡುತ್ತಿರುತ್ತಾರೆ...' ಎನ್ನುತ್ತ ಕಾರನ್ನು ನಿಧಾನ ಮಾಡಿ ಹೊರಗೆ ನೋಡಿದನು ಬೊಂದಯ.

ಒಮ್ಮಿಂದೊಮ್ಮೆಗೇ ಜೋರಾಗಿ ಅಳು ಕೇಳಲಾರಂಭಿಸಿತು. 'ಎಲ್ಲಿ ಹೋಗಲೇ ಮಗಳೇ ನಾನೇನು ಮಾಡಲೇ... ಎಂತಹ ಕೆಲಸ ಆಯಿತು... ಮಗಳೇ...' ಯಾವುದೋ ಹೆಂಗಸಿನ ಧ್ವನಿ. ಇನ್ನಾರೋ ನೋವಿನಿಂದ ಅರಚುತ್ತಿದ್ದಾರೆ. ಹೊರಗೆ ನಿಂತವರು ಮಳೆಗೆ ಪೂರ್ತಿ ತೊಯ್ದು ಗಡಿಬಿಡಿಯಲ್ಲಿದ್ದಾರೆ.

'ಏನು ಕಾಕ ಏನಾಯಿತು... ಯಾರೋ ಅಳುತ್ತಿರುವಂತಿದೆ' ಕಾರು ನಿಲ್ಲಿಸಿ ಕೇಳಿದನು ಬೊಂದಯ.

'ನನಗೇನೋ ಗೊತ್ತು... ಮೊದಲು ನೀನು ನಡಿ... ಹೋಗೋಣ...' ಗದರಿಸಿದನು ಬಾಲಯ್ಯ.

ಬೊಂದಯನಿಗೆ ಕೋಪ ಬಂದಿತು. 'ಏ... ಇರು... ಹೋಗೋಣ ಹೋಗೋಣ... ಹೋಗುವಿಯಂತೆ ತಡಿ. ಅಲ್ಲಿ ಯಾರೋ ಸಾವಿನ ಕೇಕೆ ಹಾಕುತ್ತಿದ್ದರೆ ನೀನು ಒಂದೇ ಸಮನೆ ಹೋಗೋಣ ಎಂದು ಬಡಬಡಿಸುತ್ತಿದ್ದೀಯ' ಎನ್ನುತ್ತ ಕಾರು ಇಳಿದ. ಬಾಲಯ್ಯ ಮಾತ್ರ ಗೊಣಗಿಕೊಳ್ಳುತ್ತ ಕದಲದೆ ಅಲ್ಲೇ ಕುಳಿತ.

ಪಕ್ಕದಲ್ಲಿಯೇ ನಿಂತ ಕಾರು, ಕಾರಿನಿಂದಿಳಿದ ಬೊಂದಯನನ್ನು ಭಯದಿಂದ ನೋಡುತ್ತ ಒಮ್ಮೆಗೇ ಮಾತು ನಿಲ್ಲಿಸಿಬಿಟ್ಟರು. ಕತ್ತಲಿನಲ್ಲಿ ಅವರ ಮುಖ ಕಾಣಿಸದಿದ್ದರೂ ಭಯಪಡುತ್ತಿರುವುದು ಮಾತ್ರ ಸ್ಪಷ್ಟವಾಗಿ ಗೋಚರಿಸುತ್ತಿದೆ. ಮನೆಯೊಳಗಿನಿಂದ ಕಿರುಚಾಟ, ಅಳು ಮಾತ್ರ ಹಾಗೆಯೇ ಕೇಳಿಸುತ್ತಿದೆ.

ಅವರು ಗಾಬರಿಯಿಂದಿದ್ದುದನ್ನು ಗಮನಿಸಿ ಮುಂದಕ್ಕೆ ಹೋಗಿ ಸೂರಿನ ಕೆಳಗೆ ನಿಂತು, 'ಸಾವಿತ್ರವ್ವ ದೊರೆಸಾನಿಯೊಂದಿಗೆ ಬಂದಿದ್ದೇವೆ. ನಮ್ಮದೂ ಸಿರಿಸಿಲ್ಲ. ಏನಾಯಿತು, ಏಕೆ ಅಳುತ್ತಿದ್ದೀರ...' ಕೇಳಿದ ಬಾಲಯ್ಯ. ಆಗ ಒಳಗಿನಿಂದ ಮಹಿಳೆಯೊಬ್ಬಳು ಹೊರಗೆ ಬಂದಳು. ಅಲ್ಲಿ ನಿಂತವರು ಅವಳ ಸುತ್ತಲೂ ಸೇರಿದರು. 'ಇನ್ನು ನನ್ನ ಕೈಲಾಗಲ್ಲ, ಭ್ರೂಣ ಎದುರು ತಿರುಗಿದೆ. ಆಸ್ಪತ್ರೆಗೆ ಹೋದರೆ ಮಾತ್ರ ಬದುಕುತ್ತದೆ... ಎಷ್ಟು ಹೆರಿಗೆ ಮಾಡಿದ್ದೇನೆ ಆದರೆ ಯಾರೂ ಇಷ್ಟು ಕಷ್ಟ ಪಟ್ಟಿದ್ದನ್ನು ನೋಡಿಲ್ಲ...' ಎಂದಳು.

'ಈ ರಾತ್ರಿ ಹೊತ್ತು ಮಳೆಯಲ್ಲಿ ಹೇಗೆ ಹೋಗೋದು. ಆಸ್ಪತ್ರೆ ಎಂದರೆ ಎಲ್ಲರೆಡ್ಡಿ ಪೇಟೆಗೆ ಹೋಗಬೇಕು. ಅದೇನು ಇಲ್ಲಿದೆಯಾ... ಗಾಡಿ ಕಟ್ಟಿಕೊಂಡು ಹೋಗಲು ಬೆಳಗಾಗಬೇಕು...' ಯಾರೋ ಅಂದರು. ಇನ್ನಾರೋ ದೇವರ ಮೇಲೆ ಭಾರ ಹಾಕಿ, 'ಗಾಡಿ ತೆಗೆಯಿರಿ' ಎಂದರು. ಆಗಲೇ ಮಳೆ ಜೋರಾಯಿತು. ಒಳಗೆ ಹೋಗಿ ನೋಡಿದ ಬೊಂದಯ. ಎಲ್ಲೋ ಬುಡ್ಡಿ ದೀಪ ಮಂದವಾಗಿ ಉರಿಯುತ್ತಿದೆ. ನೋವು ತಿನ್ನುತ್ತಿದ್ದ ಗರ್ಭಿಣಿ ಕಿರುಚುತ್ತ ಒದ್ದಾಡುತ್ತಿದ್ದಾಳೆ. ಸುತ್ತುವರಿದಿದ್ದ ಹೆಂಗಸರು ಅಳುತ್ತಿದ್ದಾರೆ. ಅವಳ ತಾಯಿ, 'ಮಗಳೇ ಮಗಳೇ' ಎಂದು ಆಕ್ರಂದಿಸುತ್ತಿದ್ದಾಳೆ. ಬೊಂದಯನಿಗೆ ಕಣ್ಣಲ್ಲಿ ನೀರು ತುಂಬಿಕೊಂಡಿತು. ಮನಸ್ಸು ಕಲಕುತ್ತಿದೆ. ಹೊರಗೆ ಯಾರೋ ಎತ್ತುಗಳನ್ನು ಕರೆತರುತ್ತಿದ್ದಾರೆ. ಮತ್ತೊಬ್ಬರು ಗಾಡಿಯನ್ನು ಸಿದ್ಧಮಾಡುತ್ತಿದ್ದಾರೆ. ಯಾರೋ ಗಾಡಿಯ ಸುತ್ತ ಪಂಚೆ ಸುತ್ತುತ್ತಿದ್ದಾರೆ.

ಕೂಗಾಟ ಕೇಳಲಾರದೆ ಬೊಂದಯ ಹೊರಗೆ ಬಂದ. 'ಈ ಮಳೆಯಲ್ಲಿ... ಕತ್ತಲಿನಲ್ಲಿ ಎತ್ತಿನ ಗಾಡಿಯಲ್ಲಿ ಹೇಗೆ ಹೋಗುತ್ತೀರ... ಹೋಗುವವರೆಗೂ ಆಕೆ ಬದುಕಿರುತ್ತಾಳಾ?' ಕೇಳಿದ. ಯಾರೂ ಮಾತನಾಡಲಿಲ್ಲ. ಅವರು ಮಾತು ಕೇಳಿಸಿಕೊಂಡಂತೆಯೂ ಇಲ್ಲ. ಎಲ್ಲರೂ ಅವರವರ ಕೆಲಸದಲ್ಲಿ ಮುಳುಗಿದ್ದಾರೆ.